## ಕಳಪೆ ಹಾಸ್ಯ

ಕಲರ್ಸ್ ಸೂಪರ್‌ನ 'ಮಗಳು ಜಾನಕಿ'ಯಲ್ಲಿ ಕೆಲವು ಹಾಸ್ಯ ಪ್ರಸಂಗಗಳು ಅಸಹಜ ಎನಿಸುತ್ತವೆ. ಶಾಮಲತ್ತೆಯ ಅಗೋಚರ ಗಂಡ, ಮಕ್ಕಳು ಹಾಗೂ ನೆರೆಮನೆಯ ಶಾರದಮ್ಮನಿಗೆ ಸಂಬಂಧಪಟ್ಟ ಕೆಲವು ಕಂತುಗಳನ್ನು ನೋಡಿದಾಗ ಸೀತಾರಾಂ ಧಾರಾವಾಹಿಗಳಲ್ಲಿ ಹಾಸ್ಯ ಪ್ರಸಂಗಗಳ ಅವಶ್ಯಕತೆ ಇಲ್ಲ ಎನಿಸುತ್ತದೆ. ಅದರಲ್ಲೂ ಡಿಸೆಂಬರ್ 11 ರ ಕಂತಿನ ಅರ್ಧ ಸಮಯ ವ್ಯರ್ಥವಾಯಿತಲ್ಲಾ ಎಂದು ಬೇಸರವಾಯಿತು. ಇದರ ಬದಲಾಗಿ ಶ್ಯಾಮಲತ್ತೆಗೆ ಮಕ್ಕಳೇ ಇಲ್ಲ, ಗಂಡ ದೇಶಾಂತರ ಹೋಗಿದ್ದಾರೆ ಎಂದಾಗಿದ್ದರೆ ಸರಿಯಾಗಿರುತ್ತಿತ್ತು. ಕಥೆ ಗಂಭೀರವಾಗಿ ಸಾಗುತ್ತಿರುವಾಗ ನಡುವೆ ಇಂತಹ ಕಳಪೆ ಹಾಸ್ಯ ಮುಜುಗರ ಹುಟ್ಟಿಸುತ್ತದೆ.

– ಮೀರಾ ಮೋಹನ್, ಕ್ಯಾಲಿಫೋರ್ನಿಯಾ

## ಸಹನೆ ಪರೀಕ್ಷೆ

ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುತ್ತಿರುವ 'ಪಾಪ ಪಾಂಡು' ಧಾರಾವಾಹಿಯ ನಿಮ್ಮಿ ಪಾತ್ರಧಾರಿ ತನ್ನ ಇಂಗ್ಲಿಷ್ ಮಿಶ್ರಿತ ಕನ್ನಡ ಸಂಭಾಷಣೆಗಳಿಂದ ವೀಕ್ಷಕರ ಸಹನೆ ಪರೀಕ್ಷೆ ಮಾಡುತ್ತಿದ್ದಾರೆ. ಅಷ್ಟಕ್ಕೂ ಕನ್ನಡಿಗರಿಗೆಲ್ಲರಿಗೂ ಆ ಅರ್ಥವಾಗದ ಇಂಗ್ಲಿಷ್ ಅರಗಿಸಿಕೊಳ್ಳಲು ಕಷ್ಟವಾಗುತ್ತದೆ. ಬಿಗ್ ಬಾಸ್‌ನ ನಿವೇದಿತಾಗೌಡರನ್ನು ಅನುಕರಿಸುವ ಈ ಪಾತ್ರಧಾರಿ ಇರದಿದ್ದರೆ ಧಾರಾವಾಹಿ ಸಹ್ಯವಾಗುತ್ತದೆ.

– ವಿಶ್ವೇಶ್ವರ ಮರಗಿ, ಬೆಂಗಳೂರು

## ಅಸಹಜ ವರ್ತನೆ

ಜನರಿಗೆ ವೈಚಾರಿಕವಾಗಿ ಏನನ್ನಾದರೂ ನೀಡುವಲ್ಲಿ ಕಲರ್ಸ್ ಸೂಪರ್ ವಾಹಿನಿಯ ಬಿಗ್ ಬಾಸ್ ವಿಫಲವಾಗಿದ್ದು ಸಮಯ ಕಳೆಯಲು ಮಾತ್ರ ನೋಡಬಹುದೆನ್ನುವ ಕಾರ್ಯಕ್ರಮವಾಗಿ ಪ್ರಸಾರವಾಗುತ್ತಿದೆ. ರಾಕೇಶ್ ಹಾಗೂ ವಿವಾಹಿತೆ ಪಾಂಡವಪುರದ ಅಕ್ಷತಾ ಅವರಿಬ್ಬರ ನಡುವಿನ ವರ್ತನೆ ಭಾರತೀಯ ಸಂಸ್ಕೃತಿಗೆ ವಾಹಿನಿ ಮಾಡುತ್ತಿರುವ ಅಪಚಾರ. ಹಲವು ನಗರಗಳಲ್ಲಿ ಈಗಾಗಲೇ ಈ ಬಗ್ಗೆ ಪ್ರತಿಭಟನೆಗಳು ನಡೆದ ಬಗ್ಗೆ ಸುದ್ದಿ ಪ್ರಕಟವಾಗಿದೆ. ಜನರನ್ನು ಅದರಲ್ಲೂ ವಿಶೇಷವಾಗಿ ಯುವ ಜನತೆಯನ್ನು ಅಡ್ಡದಾರಿಗೆಳೆಯುವ ಎಲ್ಲ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ವೀಕ್ಷಕರು ಬಹಿಷ್ಕಾರ ಹಾಕುವ ಮುನ್ನ ವಾಹಿನಿಯವರೇ ತಮ್ಮ ಕಾರ್ಯಕ್ರಮದ ಜಾಡನ್ನು ಬದಲಿಸಿಕೊಳ್ಳಲಿ.

– ಕೊ.ಸು.ನರಸಿಂಹ ಮೂರ್ತಿ, ಮೈಸೂರು

ವಾರದ ಪತ್ರ

## ಇದೆಂತಹ ಕನ್ನಡ ಕಾರ್ಯಕ್ರಮ!

'ಹಾಯ್, ಹಲೋ, ಎವರಿಬಡಿ, ಹ್ಯಾಪಿ ರಾಜ್ಯೋತ್ಸವ ಟು ಆಲ್ ಅವರ್ ವ್ಯೂವರ್ಸ್, ಇಂದಿನ ಕುಕಿಂಗ್ ಹೋಂಗೆ ವೆಲ್‌ಕಮ್! ಟುಡೇ ಕೊಕೋನಟ್ ಬರ್ಫಿ ಮಾಡುವ ಬಗ್ಗೆ ತಿಳಿಯೋಣ ಎಸ್! ಬನ್ನಿ ಇದಕ್ಕೆ ಬೇಕಾಗುವ ಸಾಮಾನು ಒಂದು ತೆಂಗಿನಕಾಯಿ, ಅರ್ಧ ಕೇಜಿ ಶುಗರ್, ಹತ್ತು ಸ್ಪೂನ್ ತುಪ್ಪ, ಒಂದು ಸ್ಪೂನ್ ಏಲಕ್ಕಿಯ ಪುಡಿ. ಮೊದಲು ಕೊಕೋನಟ್ ತುರಿದು ಬಾಣಲೆಯಲ್ಲಿ ಫ್ರೈ ಮಾಡಿ ಸೈಡ್‌ನಲ್ಲಿಟ್ಟುಕೊಳ್ಳಿ. ಶುಗರ್ ಹಾಗೂ ಹಾಫ್ ಲೀಟರ್ ವಾಟರನ್ನು ಗ್ಯಾಸ್‌ಸ್ಟವ್ ಮೇಲೆ ನೂಲು ಪಾಕ ಬರುವವರೆಗೆ ಬಾಯಿಲ್ ಮಾಡಿ. ನಂತರ ತುಪ್ಪ ಹಾಗೂ ಏಲಕ್ಕಿ ಪೌಡರ್ ಮಿಕ್ಸ್ ಮಾಡಿ. ಲೆಫ್ಟ್ ರೈಟ್ ಚೆನ್ನಾಗಿ ಮಿಕ್ಸ್ ಮಾಡಿ ಟ್ರೇನಲ್ಲಿ ಹಾಕಿ ಕೋಲ್ಡ್ ಆದ ಮೇಲೆ ಸ್ಮಾಲ್ ಪೀಸ್‌ಗಳಾಗಿ ಕಟ್ ಮಾಡಿರಿ. ಈಗ ಕೊಕೋನಟ್ ಬರ್ಫಿ ರೆಡಿ! ಟೇಸ್ಟ್ ನೋಡೋಣ. ವ್ಹಾವ್! ಸೂಪರ್! ಯಮ್ಮಿ!

ಇದು ಇಂದಿನ ನಮ್ಮ ಹಲವು ಕನ್ನಡ ವಾಹಿನಿಗಳ ಅಡುಗೆ ಕಾರ್ಯಕ್ರಮದ ಸಿಹಿಸಿಹಿ ಸವಿಗನ್ನಡ! ಹಾಗಾಗಿಯೇ ನೋಡಿದಾಗಲೆಲ್ಲ ಕುಣಿದಾಡುವುದೆನ್ನೆದೆ!

– ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ವಾಸ್ತವಕ್ಕೆ ಹತ್ತಿರ..!

'ಮಗಳು ಜಾನಕಿ ಮನಮುಟ್ಟುವ ಧಾರಾವಾಹಿ ಎಂದರೆ ಉತ್ಪ್ರೇಕ್ಷೆಯಲ್ಲ. ಇಲ್ಲಿಯ ಕಥಾವಸ್ತು ವಾಸ್ತವಕ್ಕೆ ತುಂಬಾ ಹತ್ತಿರವಾಗಿದೆ. ಇಂದಿನ ವಿದ್ಯಾವಂತ ಯುವ ಪೀಳಿಗೆಯವರು ಅದರಲ್ಲೂ ಸೂಕ್ಷ್ಮ ಮನಸ್ಸಿನ ಹೆಣ್ಣುಮಕ್ಕಳು ಸತ್ಯ ಕಹಿ ಎಂದು ಗೊತ್ತಿದ್ದರೂ ಮುಂದೆ ಬಂದಿದ್ದನ್ನು ಎದುರಿಸುತ್ತೇನೆ ಎಂದು ಹೇಳುತ್ತಾರೆಯೇ ಹೊರತು ಸುಳ್ಳನ್ನು ಇಷ್ಟಪಡಲಾರರು. ಎಲ್ಲ ಹೆಣ್ಣುಮಕ್ಕಳೂ ಹಣ, ಅಧಿಕಾರಗಳಿಗೆ ಆಸೆಪಡಲಾರರು. ಇನ್ನೊಂದು ಮುಖ್ಯ ವಿಚಾರವೆಂದರೆ ಗಂಡಹೆಂಡಿರ ಮಧ್ಯೆ ಏನೇ ಮನಸ್ತಾಪ ಬಂದರೂ 'ಡೈವೋರ್ಸ್' ಪರಿಹಾರವಲ್ಲ, ಅವಸರದ ನಿರ್ಧಾರಗಳು ಒಳ್ಳೆಯದಲ್ಲ ಎಂಬ ಸಂದೇಶವನ್ನೂ ಜನರಿಗೆ ಕೊಡುವುದರಲ್ಲಿದ್ದಾರೆ ಎಂಬುದು ವ್ಯಕ್ತವಾಗುತ್ತದೆ.

– ಕಲ್ಪನಾ ಪ್ರಭಾಕರ ಸೋಮನಳ್ಳಿ, ಶಿರಸಿ

## ಪಾತ್ರಕ್ಕೆ ತಕ್ಕಂತೆ ವೇಷಭೂಷಣ ಇರಲಿ

ಬೆಳ್ಳಿ ತೆರೆಯಲ್ಲಿ ಮೂಡಿ ಬರುವ ಬಹುತೇಕ ಧಾರಾವಾಹಿಗಳ 'ಥೀಮ್' ಬಗ್ಗೆ ಪ್ರಸ್ತಾಪವೇ ಅನವಶ್ಯಕ. ಕಾರಣ ಈ ವಿಚಾರದಲ್ಲಿ 'ಜಾಣರ ಪೆಟ್ಟಿಗೆ' ಓದುಗರ ಸಾಕಷ್ಟು ಅಭಿಪ್ರಾಯಗಳನ್ನು, ಟೀಕೆಟಿಪ್ಪಣಿಗಳನ್ನು, ವಿಮರ್ಶೆಗಳನ್ನು ಪ್ರಕಟಿಸಿದೆ. ಆದರೆ, ವಯಸ್ಸಿನ ಅಂತರವಿರುವ ಕೆಲವು ಪಾತ್ರಗಳಿಗೆ ವೇಷ ಭೂಷಣದ ಆಯ್ಕೆಯ ನಿರ್ಧಾರದಲ್ಲಿ ನಿರ್ದೇಶಕರ ಪ್ರಬುದ್ಧತೆ, ತರ್ಕ ಅತ್ಯಂತ ಮಹತ್ವವಾಗಿರುತ್ತದೆ. 'ಕೃಷ್ಣ ತುಳಸಿ' ಧಾರಾವಾಹಿಯನ್ನು ಈ ವ್ಯಾಖ್ಯಾನಕ್ಕೆ ಉದಾಹರಣೆಯಾಗಿ ತೆಗೆದುಕೊಂಡರೆ ಅಪ್ಪ ಹಾಗೂ ಮಗನ ಪಾತ್ರಧಾರಿಗಳಲ್ಲಿ ವಯೋಮಾನದ ವ್ಯತ್ಯಾಸವೇ ಕಾಣದಿರುವುದು ನಿರ್ದೇಶನದ ವೈಫಲ್ಯವನ್ನು ತೋರಿಸುತ್ತದೆ. ನಿರ್ದೇಶಕರ ಸಾಮರ್ಥ್ಯವೂ ಧಾರಾವಾಹಿಯ ಯಶಸ್ಸಿನಲ್ಲಿ ಮಹತ್ತರವಾದ ಪಾತ್ರವಹಿಸುತ್ತದೆ ಎಂಬುದನ್ನು ವೀಕ್ಷಕರು ಗಮನಿಸುತ್ತಾರೆ ಎಂಬ ಬಗ್ಗೆ ನಿರ್ದೇಶಕರಿಗೆ ಕಾಳಜಿ ಇರಲಿ.

– ನಳಿನಿ ಆರ್. ಮಾಗಲ್, ಸಕಲೇಶಪುರ

## ಕುತೂಹಲಕಾರಿ 'ರಾಧಾರಮಣ'

ಕಲರ್ಸ್ ಕನ್ನಡದ 'ರಾಧಾರಮಣ' ಚೆನ್ನಾಗಿದೆ. ಕುತೂಹಲದಿಂದ ಕೂಡಿದೆ. ಅವನಿ ಮತ್ತು ಅತ್ತೆ ಪಾತ್ರಧಾರಿ ಸಿತಾರಾ ದೇವಿಯ ನಟನೆ ಜಬರ್ದಸ್ತಾಗಿದೆ. ಸಿತಾರಾದೇವಿಗೆ ಸತಾಯಿಸುವ ದೇವಿ ಎನ್ನಬಹುದು.

'ಲಕ್ಷ್ಮಿ ಬಾರಮ್ಮ'ದಲ್ಲಿ ಗೊಂಬೆಗೆ ಹಳೆಯ ನೆನಪುಗಳು ಬರುವಂತೆ ಮಾಡಲು ನಿರ್ದೇಶಕರು ಮರೆತಂತಿದೆ. ಪ್ರತಿ ದಿನ ಅದನ್ನೇ ನೋಡಿ ನೋಡಿ ಬೇಸರವಾಗುತ್ತಿದೆ. ಗೊಂಬೆಗೆ ಯಾವಾಗ ನೆನಪು ಬರುತ್ತದೆ?

– ಲೀಲಾ ಚಂದ್ರಶೇಖರ್, ಬೆಂಗಳೂರು

## ತಾಳ್ಮೆಗೂ ಮಿತಿ ಇದೆ..

ಕಲರ್ಸ್ ಸೂಪರ್‌ನ 'ಮನೆಯೇ ಮಂತ್ರಾಲಯ' ಕಥಾ ನಾಯಕ ಅರ್ಜುನ್ ಇನ್ನೂ ಎಷ್ಟು ದಿನ ಪತ್ನಿ ಕೃಷ್ಣವೇಣಿಯನ್ನು ಕಡೆಗಣಿಸುತ್ತಿರುತ್ತಾನೆ? ಹಾಗೆಯೇ ಅರ್ಜುನ್ ಚಿಕ್ಕಮ್ಮ ಪ್ರಿಯಾಂಕ ಕೃಷ್ಣವೇಣಿಗೆ ಕಿರುಕುಳ ಕೊಡುತ್ತಿರುತ್ತಾಳೆ. ಮನೆಯ ಹಿರಿಯ ಮಗ ಅವಿನಾಶ್ ಪತ್ತೆಯೇ ಇಲ್ಲ.

ಮನೆಯ ಮಕ್ಕಳೂ ಶಾಲೆಗೆ ತೆರಳುವುದಿಲ್ಲ. ಸದಾ ಪರಿವಾರದವರು ಮೋಜಿನಲ್ಲಿಯೇ ಕಾಲ ಕಳೆಯುತ್ತಿರುತ್ತಾರೆ. ಹೀಗೆ ಏಕತಾನತೆಯಿಂದ ಕೂಡಿರುವ ಕಥೆಗೆ ತಿರುವು ನೀಡಬೇಕು. ಎಲ್ಲದಕ್ಕೂ ಉತ್ತರ ಅಂತ್ಯದಲ್ಲಿ ಕಾಣಬಹುದೇ?

– ಪೂರ್ಣಿಮಾ ಮೂರ್ತಿ, ಬೆಂಗಳೂರು